ಮೈಸೂರ ಗೆಜೆಟ್.

ಸಂ. XXXI.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 16.

ಬೆಂಗಳೂರು, ಗುರುವಾರ, ಏಪ್ರೆಲ್ ತಾ॥ 23, ಸ್ ೧೮೯೬.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರಿಜಿಸ್ಟ್ರೇರ್ಷ ವ ಯಪ್ಯು ಕೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆರ್ಷ ಜಡ್ಜ್‌ರು, ಡಿಸ್ಟ್ರಿಕ್ಟು ಡಿಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗ್ಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮುಂಜಾರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇರ್ಷಗಳು.—ಇಲ್ಲ.

4ನೇ ಭಾಗ—ಸರ್ಕಾರಿ ಕಾಗದ ಪತ್ರಗಳು.—ಇಲ್ಲ.

ಟಿಪ್ಪಣಿ. ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 9ನೇ ಏಪ್ರೆಲ್ 1896.

ನಂ. 11470.—ಜು. 1273,—ಹಾಸನ ಡಿಸ್ಟ್ರಿಕ್ಟು ಪೊಲೀಸ್ ಸೂಪರ್ಟೆಂಡೆಂಟ್ ಮೆಸ್ಸರ್ಸ್ ಸಯ್ಯದ್ ಅಮೀರ್ ಹಸ್ಸನ್ ಯವರಿಗೆ, 1896ನೇ ಮಾರ್ಚಿ 21ನೇ ಮಾರ್ಕ್ಕಂ 10888—ಜು. 1201ನೇ ನಂಬರ್ ಗವರ್ಮೆಂಟ್ ಇಸ್ತಿಹಾರಿನಾಮೆಯಲ್ಲಿ ಕೊಡಲ್ಪಟ್ಟಿರ್ದ ಹದಿನೈದು ದಿನಗಳ ಕ್ಯಾಜುಯಲ್ ರಜಾವನ್ನು ಅವರ ಕೋರಿಕೆಯಂತೆ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 11ನೇ ಏಪ್ರೆಲ್ 1896.

ನಂ. 11487.—ಜು. 1278,—ಶ್ರೀರಂಗಪಟ್ಟಣದ ತಾಲ್ಲೂಕು ಅಮಲ್ದಾರ್ ವೆಂಕಟಾಚಲಯ್ಯನವರು ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ ಎರಡನೇ ಕ್ಲಾಸಿನ ಒಬ್ಬ ಮಾಜಿಸ್ಟ್ರೇಟರಾಗಿ ನೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 24ನೇ ಮಾರ್ಚ 1896.

ನಂ. 8758.—ಆರ್. 3394, 1894ನೇ ಇಸವಿ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಯಿದರಿಂದ ಪ್ರಕಟಿಸಲ್ಪಡುವದೇನಂದರೆ,—ಈ ಕೆಳಗೆ ನಮೂದಿಸಿರುವ ಜಮೀನುಗಳು ಸರ್ಕಾರ್ ಕೆಲಸಕ್ಕೆ ಅಂದರೆ ಕೋಲಾರದಲ್ಲಿ ಡೆಪ್ಯುಟಿ ಕಮ್ಮಿಷನರವರ ಹೊಸ ಬಂಗಲೆಯ ಕಾಂಪೌಂಡಿಗಾಗಿ ಬೇಕಾಗಿಯಿರುತ್ತೆ.

ತಿಪ್ಪಸಂದ್ರ ಹೋಬಳಿ	ಕೋಲಾರ ತಾಲ್ಲೂಕು	ಕೋಲಾರ ಜಿಲ್ಲೆ	ಗ್ರಾಮದ ಹೆಸರು	ಖಾತೇದಾರರ ಹೆಸರು	ಸರ್ವೇ ಸೆಟಲ್‌ಮೆಂಟಿಗೆ ಪೂರ್ವದ ಹಳೇ ಲೆಕ್ಕಗಳ ಪ್ರಕಾರ ಜಮೀನಿನ ತಪ್ಪೀಲ್. ನಿಂಬರಕ್ಕೆ	ನಂಬರು.	ವಿಸ್ತೀರ್ಣ.	ಹದ್ದಾಯ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಖಂ. ಕೊ. ಪ.	ರೂ. ಆ. ಪೈ				
				ಗೋವಿಂದರಾಜು ಖುಷ್ಕಿ ಪಿಳ್ಳಿ, (ಅನುಭವದಾರ ತಿಮ್ಮಾ ಮೇಸ್ತ್ರಿ)	ಖುಷ್ಕಿ	603	0—0—2	0-1-9	ಮಾಜಿ ನಂ. 602 ತೋಟ	ಮಾಜಿ ನಂ. 604 ಬಂಜರು	ಮಾಜಿ ನಂ. 605 ಪಲ್ಲಿಗಕುಂಟೆ	ಮಾಜಿ ನಂ. 599 ಸರ್ಕಾರದ ಬಂಜರು
					ಖುಷ್ಕಿ	605	0—0—10½	0-9-2				
				ವಾನಂಬಾಡಿ ಬಸಪ್ಪ (ಅನುಭವದಾರ ತಿಮ್ಮಾ ಮೇಸ್ತ್ರಿ)	ಖುಷ್ಕಿ	605	0—0—7½	0-6-11	ಮಾಜಿ ನಂ. 606 ಬಂಜರು	ಮಾಜಿ ನಂ. 598 ರಸ್ತೆ	ಮಾಜಿ ನಂ. 486 ಚರಂಡಿ	ಮಾಜಿ ನಂ. 602, 603 ಮತ್ತು 604 ಬಂಜರು

ತಾರೀಖು 13ನೇ ಏಪ್ರಿಲ್ 1896.

ನಂ. 11582.—ಜು. 1285,—ಸ್ವ 1877ನೇ ಇಸವಿಯ IIIನೇ ನಂಬರ್ ರಿಜಿಸ್ಟ್ರೇಷನ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಮೈಸೂರ್ ಗವರ್ನ್‌ಮೆಂಟಿನವರು, ಇದರಡೀಕಂಡ ಬಡ್ತಿಗಳು, ಪೊಕರರಾತಿಗಳು ಮತ್ತು ನೇಮಣೂಕಿಗಳನ್ನು ಹುಕುಂ ಮಾಡಿರುತ್ತಾರೆ:—

I. ಎಡತೊರೆ 1ನೇ ಗ್ರೇಡ್ ಸಬ್ ರಿಜಿಸ್ಟ್ರಾರ್ ಟಿ. ಕೆ. ಲಕ್ಷ್ಮಣ ಅಯ್ಯರ್, ಬಿ. ಏ., ಯವರು, ಬರ್ತರಫ್ ಮಾಡಲ್ಪಟ್ಟ ಟಿನ್ನಿ ತಂಬಿ ಮೊದಲಿಯಾರ್‌ಗೆ ಬದಲಾಗಿ, ತಿರುಮಕೂಡ್ಲು ನರಸೀಪುರಕ್ಕೆ ವರ್ಗ ಮಾಡಲ್ಪಟ್ಟಿರುತ್ತಾರೆ.

II. ಚಾಮರಾಜನಗರದ 2ನೇ ಗ್ರೇಡ್ ಸಬ್ ರಿಜಿಸ್ಟ್ರಾರ್ ಟಿ. ಕೇಷವಾದ್ರಯ್ಯಂಗಾರ್ರು, 1ನೇ ಗ್ರೇಡಿಗೆ ಬಡ್ತಿ ಮಾಡಲ್ಪಟ್ಟು ಮತ್ತು ವರ್ಗ ಮಾಡಲ್ಪಟ್ಟ ಟಿ. ಕೆ. ಲಕ್ಷ್ಮಣ ಅಯ್ಯರಿಗೆ ಬದಲಾಗಿ ಯಡತೊರೆಗೆ ನೇಮಿಸಲ್ಪಟ್ಟಿರುತ್ತಾರೆ.

III. ಮೈಸೂರು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ರ ಆಫಿಸ್ ಹೆಡ್‌ಕ್ಲರ್ಕ್ ಬಿ. ವೆಂಕಟಪತಯ್ಯಂಗಾರು, 2ನೇ ಗ್ರೇಡ್ ಸಬ್ ರಿಜಿಸ್ಟ್ರಾರಾಗಿ ಪೊಕರರ್ ಮಾಡಲ್ಪಟ್ಟು ಮತ್ತು ವರ್ಗ ಮಾಡಲ್ಪಟ್ಟ ಟಿ. ಕೇಷವಾದ್ರಯ್ಯಂಗಾರಿಗೆ ಬದಲಾಗಿ ಚಾಮರಾಜನಗರಕ್ಕೆ ನೇಮಿಸಲ್ಪಟ್ಟಿರುತ್ತಾರೆ.

IV. ಹಾಲಿ ತಿರುಮಕೂಡ್ಲು ನರಸೀಪುರದ ಆಕ್ಟಿಂಗ್ ಸಬ್ ರಿಜಿಸ್ಟ್ರಾರಾಗಿರುವ ಏ. ಕಾಮರಾವ್ ಬಿ. ಏ., ಯವರು, 3ನೇ ಗ್ರೇಡ್ ಸಬ್ ರಿಜಿಸ್ಟ್ರಾರಾಗಿ ಪೊಕರರ್ ಮಾಡಲ್ಪಟ್ಟು ಮತ್ತು ಮೈಸೂರ್ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ರ ಆಫಿಸಿಗೆ ವರ್ಗ ಮಾಡಲ್ಪಟ್ಟ ಸಿ. ವೆಂಕಟರಾವ್ ಬಿ. ಏ., ಯವರಿಗೆ ಬದಲಾಗಿ ಮಳವಳ್ಳಿಗೆ ನೇಮಿಸಲ್ಪಟ್ಟಿರುತ್ತಾರೆ.

ನಂ 106.—ಮೊಕ್ತಾಂ ಮೈಸೂರ್, ತಾರೀಖು 13ನೇ ಏಪ್ರಿಲ್ 1896.

ಮೈಸೂರ ಲೋಕಲ್ ಸರ್ವಿಸ್ ಪರೀಕ್ಷೆ ರೂಲ್‌ಗಳ 5ನೇ ರೂಲಿಗೆ ಈ ಕೆಳಗೆ ಕಂಡ ಜಾಸ್ತೀ ಅಂಕಗಳು ಸೇರಿಸಲ್ಪಟ್ಟಿರುತ್ತೆಂದು ಸರ್ವರ ತಿಳುವಳಿಕೆ ಬಗ್ಯಾಗಿ ಫಾಯಿಷ್ ಮಾಡಲ್ಪಟ್ಟಿರುತ್ತೆ:—

"ಉಮೇದ್ವಾರರುಗಳು 1ನೇ ಕ್ಲಾಸಿನಲ್ಲಿ ತೇರ್ಗಡೆಯಾಗಲಿಕ್ಕೆ ಅನ್ಯಥಾ ಅರ್ಹರಾಗಿದ್ದು ಪರಂತು ವೊಂದು ಪಾಠದಲ್ಲಿ ಮಾತ್ರ ತಪ್ಪಿಕೋಗಿ ತಕ್ಕಷ್ಟವರಿಗೆ ಹಾಗೆ ಸದರೀ ಪಾಠಕ್ಕೋಸ್ಕರ ಕೊಟ್ಟಿರುವ ಕಮ್ಮಿ ನಂಬರುಗಳ ಮೇಲೆ ಕೇಕಡಾ ಹತ್ತರ ಮೇರೆ ರಿಯಾಯತೀ ತರೀಕ ಕೊರಿಸಿ ಕೊಡಲ್ಪಡತಕ್ಕದ್ದು."

ಮೊಕ್ತಾಂ ಮೈಸೂರ್, ತಾರೀಖು 14ನೇ ಏಪ್ರಿಲ್ 1896.

ನಂ. 11611.—ಲೋ. ಫಂ. 125—92,—ಮೆಸ್ಸರ್ಸ್ ಭಂಗಿಬಸ್ಸೆಟ್ಟಿ ಮತ್ತು ಪಟೇಲ್ ಶಿಂಗಭಟ್ಟ ಇವರುಗಳು ಕಡೂರು ಡಿಸ್ಟ್ರಿಕ್ಟ್ ಲಚ್ಚಂಪುರ ಮುನಿಸಿಪಾಲಿಟಿಯ ಜಾಸ್ತಿ ಮೆಂಬರ್‌ರಾಗಿ ಪೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 11612.—ಲೋ. ಫಂ. 125—92,—ಕಡೂರು ತಾಲ್ಲೂಕು ಶಿರಸ್ತೇದಾರ್ ಮೆಸ್ಸರ್ ಸುಬ್ಬಣ್ಣನವರು, ಕಡೂರು ಮ್ಯುನಿಸಿಪಲ್ ಜೋಡಿನ ನ್ಯೂಬ್ಬ ನೇಮಣೂಕೀ ಮಾಡಲ್ಪಟ್ಟ ಮೆಂಬರಾಗಿ ಪೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 4ನೇ ಏಪ್ರಿಲ್ 1896.

ನಂ. 11295.—ಲೋ. ಧಂ. 257—92, ಲ್ಯಾಂಡ್ ಅಕ್ವಿಜಿಷ್ಷನ್ ರೆಗ್ಯುಲೇಷನ್ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಕಟಪಡಿಸುವದೇನಂದರೆ,—ಈ ಕೆಳಗಿನ ಪಟ್ಟಿಯಲ್ಲಿ ತೋರಿಸಿಯಿರುವ ಜಮೀನುಗಳು ಸರ್ಕಾರದ ಕೆಲಸಕ್ಕೆ ಅಂದರೆ ಕೋಲಾರ ಡಿಸ್ಟ್ರಿಕ್ಟು ಬಾಗೇಪಲ್ಲಿ ತಾಲ್ಲೂಕು ಬಾಗೇಪಲ್ಲಿ ಟವ್ನ ಬಡಾಯಿಸುವದಕ್ಕಾಗಿ ಬೇಕಾಗಿರುತ್ತೆ:—

ನಂಬರು.	ಸರ್ವೇ ನಂಬರು.	ಖಾತೇದಾರನ ಹೆಸರು.	ವಟ್ಟುಜಮೀನಿನ ವಿಸ್ತೀರ್ಣ.		ಹೊಂದಲ್ಪಡತಕ್ಕ ಜಮೀನು.		ಸರಹದ್ದು.			
			ವಿಸ್ತೀರ್ಣ	ಕಂದಾಯ.	ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
			ಎ. ಗು.	ರೂ. ಆ. ಪೈ.	ಎ. ಗು.	ರೂ. ಆ. ಪೈ.				
1	ಖುಷ್ಕಿ ನಂ. 160ರ ಪೈಗಂಣ	ಶಂಕರ ನಾ	3—31	5 12 0	1—20	2 4 0	ಫಕ್ಕುಸಾಹೇಬನ ಕಂದಾಯದ ಭೂಮಿ	ರಾಮಾಚಾರಿ, ಪುಟ್ಟಾಚಾರಿ ಮತ್ತು ವೇದಾಂತಾಚಾರ್ರ ಯಿನಾಮತಿ	ರಸ್ತೆ	ಖಾತೇದಾರನ ಜಮೀನು
2	(ಖುಷ್ಕಿ)ಭಟ್ಟಇನಾಂ ನಂ. 159	ರಾಮಾಚಾರಿ, ಪುಟ್ಟಾಚಾರಿ ಮತ್ತು ವೇದಾಂತಾಚಾರಿ	1—38	3 0 0	0—20	0 12 0	ಶಂಕರ ನಾಗಂಣನ ಕಂದಾಯದ ಭೂಮಿ	ಸುಣ್ಣಕಲ್ಲುವೆಂಕಟಣ್ಣನ ಕಂದಾಯದ ಭೂಮಿ	ರಸ್ತೆ	ಡಿಟೋ
3	ಖುಷ್ಕಿ ನಂ. 153ರ ಪೈ	ಸುಣ್ಣಕಲ್ಲು ವೆಂಕಟಗಾ	1—11	2 0 0	0—18	0 10 9	ಪುಟ್ಟಾಚಾರಿ, ರಾಮಾಚಾರಿವೇದಾಂತಾಚಾರ್ರ ಇನಾಮತಿ	ಕೋಡಿ ಚರುವು ಹನುಮಂತನ ಕಂದಾಯದ ಭೂಮಿ ಮತ್ತು ಸರ್ಕಾರದ ಖಾಲೀ ಜಮೀನು,	ರಸ್ತೆ	ಡಿಟೋ
4	ಡಿಟೋ	ಕೋಡಿಚರವು ಹನುಮಂತ (ಅನುಭವದಾರ್ ನರಶಿಹ್ಮ)	3—12	5 0 0	0—15	0 9 0	ಸುಣ್ಣಕಲ್ಲುವೆಂಕಟಣ್ಣನ ಕಂದಾಯದ ಭೂಮಿ	ಬಣಿ ಮತ್ತು ಬಾಕಿ ಜಮೀನು	ಸರ್ಕಾರದ ಬಂಜರು ಜಮೀನು	ಡಿಟೋ

ತಾರೀಖು 14ನೇ ಏಪ್ರಿಲ್ ಸ್ ಸ್ 1896ನೇ ಇಸವಿ.

ನಂ. 11613.—ಜು. 1287,—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ ರವಿನ್ಯೂ ಪ್ರೊಬೇಷನರಾದ ಆರ್ಯ. ರಂಗರಾಯರಿಗೆ ಅವರು ಬೆಂಗಳೂರು ತಾಲ್ಲೂಕಿನ ಚಾರ್ಜಿನಲ್ಲಿರುವ ಕಾಲವಲ್ಲಿ ಮೂರನೇ ಕ್ಲಾಸ್ ಮಾಜಿಸ್ಟ್ರೇಟರ ಅಧಿಕಾರಗಳು ಕೊಡಲ್ಪಟ್ಟಿರುತವೆ.

ನಂ. 11616.—ಜು. 1290,—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ ಹಾಸನ ತಾಲ್ಲೂಕು ಅಮಲ್ದಾರ್ ಪಿ. ನಂಜುಂಡನಾಯಡು ಯವರು ಪ್ಲೊಬ್ಬ ಎರಡನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಪೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 15ನೇ ಏಪ್ರಿಲ್ 1896.

ನಂ. 11687.—ಜು. 1301,—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ ಹಾಸನ ಡಿಸ್ಟ್ರಿಕ್ಟು ಟೆಜರೀ ಚಾರ್ಜಿನಲ್ಲಿರುವ ಪ್ರೊಬೇಷನರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಕೆ. ಚಾಂಡಿ, ಬಿ. ಏ., ಯವರು ಮೂರನೇ ಕ್ಲಾಸ್ ಪ್ಲೊಬ್ಬ ಮಾಜಿಸ್ಟ್ರೇಟರ ಅಧಿಕಾರಗಳನ್ನು ಕೊಡಲ್ಪಟ್ಟಿರುತ್ತಾರೆ.

ತಾರೀಖು 6ನೇ ಏಪ್ರಿಲ್ 1896.

ನಂ. 9190.—ರೆ. ಫೈ. 109—95, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ ಕೋಲಾರ ಟೆಸಬ್ ಡಿವಿಜ್ ಆಫಿಸರಾದ ಮೆಸ್ಟರ್ ಸಿ. ರಾಘವಾಚಾರ್ಲು ಯವರಿಗೆ, 189ನೇ ಇಸವಿ ಏಪ್ರಿಲ್ ಗುರ್ರೇ ಲಾಗಾಯತು ಯಾ ಆವರು ಉಪಯೋಗಿಸಿಕೊಳ್ಳಬಹುದಾದ ಇತರ ತಾರೀಖಿನಾರಭ್ಯ ನಾಲ್ಕು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 8ನೇ ಏಪ್ರಿಲ್ 1896.

ನಂ. 9207.—ಫಾ. ಫೈ. 62—95,—ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ ಹೆಗ್ಗಡದೇವನಕೋಟೆ ಫಾರೆಸ್ಟ್ ಸಬ್ ಡಿವಿಜ್ ಫಾರೆಸ್ಟ್ರುಗಳ ಸಬ್ ಅಸಿಸ್ಟೆಂಟ್ ಕನ್ಸರವೇಟರಾದ ಮೆಸ್ಟರ್ ಎಂ. ಜೆ. ರಾಮರಾಜುರಿಗೆ, 1896ನೇ ಫಿಬ್ರವರಿ 14ನೇ ಮುಕ್ಕಂ ಲಾಗಾಯತು ನಾಲ್ಕು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 9240.—ರೆ. 3568,—ಮೈಸೂರ ಸರ್ವಿಸ ರೆಗ್ಯುಲೇಷ್ಯಗಳ 171ನೇ ಆರ್ಟಿಕಲ್ ಅನುಸರಿಸಿ ಚಿಕ್ಕಮಗಳೂರು ತಾ॥ ಲ್ಲೂಕು ಅಮಲ್ದಾರ್ ಬಿ. ರಾಮಸ್ವಾಮಯ್ಯನವರಿಗೆ, 1896ನೇ ಏಪ್ರಿಲ್ 5ನೇ ಮಕ್ಕುಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ಅಮಲ್ದಾರ್ರು ರಜಾದ ಮೇಲೆ ಗೈರ್ಹಾಜರಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ತಾಲ್ಲೂಕು ಶಿರಸ್ತೇದಾರ್ರು ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ನಂ. 9243.—ರೆ. 3571.—ಮೈಸೂರ ಸರ್ವಿಸ ರೆಗ್ಯುಲೇಷ್ಯಗಳ 171ನೇ ಆರ್ಟಿಕಲ್ ಅನುಸರಿಸಿ ಹೆಗ್ಗಡದೇವನಕೋಟೆ ತಾಲ್ಲೂಕು ಅಮಲ್ದಾರ್ ಟಿ. ರಾಮಚಂದ್ರರಾಯರಿಗೆ, 1896ನೇ ಮಾರ್ಚಿ 19ನೇ ಮಕ್ಕುಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 9ನೇ ಏಪ್ರಿಲ್ 1896.

ನಂ. 9260.—ರೆ. ಫೈ. 123—95.—ಮದ್ದಗಿರಿ ತಾಲ್ಲೂಕು ಅಮಲ್ದಾರ್ ಚಾಡಯ್ಯನವರಿಗೆ 1896ನೇ ಫಿಬ್ರವರಿ 24ನೇ ಮಕ್ಕುಂ 7578—ರೆ. 2963ನೇ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟಿದ್ದ ಒಂದು ತಿಂಗಳ ಪ್ರಿವಿಲೀಜ್ ರಜಾವನ್ನ ಅವರ ಕೋರಿಕೆ ಯಂತೆ ಯಿದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 9263.—ರೆ. ಫೈ. 122—95.—ಮೈಸೂರ ಸರ್ವಿಸ ರೆಗ್ಯುಲೇಷ್ಯಗಳ 171ನೇ ಆರ್ಟಿಕಲ್ ಅನುಸರಿಸಿ ಮಳವಳ್ಳಿ ತಾ॥ ಲ್ಲೂಕು ಅಮಲ್ದಾರ್ ಹಸನಲ್ಲಿಬೇಗ್ ಯವರಿಗೆ, ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖು ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ಅಮಲ್ದಾರ್ರು ರಜಾದಮೇಲೆ ಗೈರ್ಹಾಜರಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ತಾಲ್ಲೂಕು ಶಿರಸ್ತೇದಾರ್ರು ತಮ್ಮ ಕೆಲಸಗಳೊಂದಿಗೆ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ನಂ. 9299.—ರೆ. ಫೈ. 121—95.—ಮೊಕ್ಕಾಂ ಮೈಸೂರ ಮೈಸೂರ ಸರ್ವಿಸ ರೆಗ್ಯುಲೇಷ್ಯಗಳ 188ನೇ ಆರ್ಟಿಕಲ್ ಅನುಸರಿಸಿ ಚಿತ್ರದುರ್ಗದ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮ್ಮಿಷನರಾದ ಮೆಸ್ಸರ್ ಯಚ್. ರಾಮಾನುಜಯ್ಯಂಗಾರಿಗೆ 1896ನೆ ಏಪ್ರಿಲ್ 21ನೇ ಮಕ್ಕುಂ ಲಾಗಾಯತು ಯಾ॥ ಅವರು ಉಪಯೋಗಿಸಿಕೊಳ್ಳಬಹುದಾದ ಯಿತರ ತಾರೀಖಿನಾರಭ್ಯ ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಸದರೀ ಮೆಸ್ಸರ್ ಯಚ್. ರಾಮಾನುಜಯ್ಯಂಗಾರ್ರು ರಜಾದ ಮೇಲೆ ಗೈರ್ ಹಾಜರಿರ್ತುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಟೈಜರೀ ಅಸ್ಸಿಂಟೆ ಕಮ್ಮಿಷನರವರು ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟಿನ ಚಾರ್ಜಿನಲ್ಲಿರತಕ್ಕದ್ದು.

ಮೊಕ್ಕಾಂ ಮೈಸೂರ ತಾರೀಖು 10ನೇ ಏಪ್ರಿಲ್ 1896.

ನಂ. 9316.—ಫಾ. ಫೈ. 91—95.—ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 218ನೇ ಆರ್ಟಿಕಲ್ ಅನುಸರಿಸಿ ಪಿಕಾರಿಪುರ ಫಾರೆಸ್ಟ್ ಸಬ್ ಡಿವಿಜ್ ಫಾರೆಸ್ಟ್ರುಗಳ ಅಸಿಸ್ಟೆಂಟ್ ಕ್ವಸರ್ವೇಟರ್ ಮೆಸ್ಸರ್ ಬಿ. ಶ್ರೀನಿವಾಸರಾಯರಿಗೆ, 1896ನೇ ಮಾರ್ಚಿ 12ನೇ ಮಕ್ಕುಂ ಲಾಗಾಯತು ಮಡಿಕಲ್ ಸರ್ಟಿಫಿಕೇಟ್ ಮೇಲೆ ಒಂದು ತಿಂಗಳು ರಜಾ ಕೊಡಲ್ಪಟ್ಟಿರುತ್ತೆ.

ಫಾರೆಸ್ಟ್ರುಗಳ ಯಕ್ಟಿಟ್ಯಾ ಅಸಿಸ್ಟೆಂಟ್ ಕ್ವಸರ್ವೇಟರ್ರಾದ ಮೆಸ್ಸರ್ ಮ್ಯಾಟಿಕೊಯವರು, ಮೆಸ್ಸರ್ ಶ್ರೀನಿವಾಸರಾಯರಿಗೆ ಚಾರ್ಜ್ ಒಪ್ಪಿಸುವವರಿಗೆ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಪಿಕಾರಿಪುರದ ಸಬ್ ಡಿವಿಜ್ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 11ನೇ ಏಪ್ರಿಲ್ 1896.

ನಂ. 9311.—ರೆ. ಫೈ. 104—95.—ಮೈಸೂರ ಸರ್ವಿಸ ರೆಗ್ಯುಲೇಷ್ಯಗಳ 171ನೇ ಆರ್ಟಿಕಲ್ ಅನುಸರಿಸಿ ತುಮಕೂರು ತಾಲ್ಲೂಕು ಅಮಲ್ದಾರ್ ಮಹಮ್ಮದ್ ರಜಾಯುವರಿಗೆ ಒಂದು ದಿನ ಅಂದರೆ 1896ನೇ ಏಪ್ರಿಲ್ 4ನೇ ಮಕ್ಕುವಿನ ದಿನ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,

ಸಿ. ಶ್ರೀನಿವಾಸಯ್ಯಂಗಾರ್ ಜನರಲ್ ವ ರವಿನ್ಯೂ
ಇಲಾಖೆಗಳ ಗವರ್ಮೆಂಟ್ ಸೆಕ್ರೆಟರಿ.